Govt. of Karnataka ಅನುಬಂಧ-ಎ [C.R.P. 67

Deposition Sheets
(R.P. No. 57)
Form No. 4
(Criminal)

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ,ಶಿರಾ.**

**ಪ್ರಕರಣ ಸಂಖ್ಯೆಃ ಸಿ.ಸಿಃ 22/2018**

| **ದಿನಾಂಕ 12.12.2022 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.** | | | |
|---|---|---|---|
| **C.W.** | 3 | **P.W.** | 2 |
| **ಹೆಸರು** | ಲಕ್ಕಮ್ಮ | | |
| **ತಂದೆಯ/ಗಂಡನ ಹೆಸರು** | ನರಸಿಂಹಣ್ಣ | | |
| **ವಯಸ್ಸು** | 58 | | |
| **ಉದ್ಯೋಗ** | ವ್ಯವಸಾಯ | | |
| **ವಾಸ** | ಎಮ್ಮೆರಹಳ್ಳಿ ಗ್ರಾಮ, ಶಿರಾ ತಾಲ್ಲೂಕು | | |

**ಮುಖ್ಯವಿಚಾರಣೆಃ ಎ.ಪಿ.ಪಿ. ರವರಿಂದಃ**

1. ಚಾ.ಸಾ.1, 2, 4 ಮತ್ತು 5 ರವರು ಗೊತ್ತಿದ್ದಾಗೆ. ಚಾಸಾ.2 ಮತ್ತು 1 ರವರು ನನ್ನ ಗಂಡ ಮತ್ತು ನನ್ನ ಮಗ. ಆರೋಪಿತರ ಪರಿಚಯವಿದೆ. ಸುಮಾರು 4-5 ವರ್ಷಗಳ ಹಿಂದೆ ಬೆಳಗ್ಗೆ ಸಮಯದಲ್ಲಿ ಎಮ್ಮೆರಹಳ್ಳಿಯಲ್ಲಿ ನಮ್ಮ ಮನೆಯ ಸೈಟಿನಲ್ಲಿ ನಾವು ಮನೆ ಕಟ್ಟುತಿದ್ದು, ನಾವು ಮತ್ತು ಆರೋಪಿತರು ಇಬ್ಬರೂ ರಸ್ತೆಯ ಮೇಲೆ ತಿಪ್ಪೆ ಹಾಕಿಕೊಂಡಿದ್ದು ಸದರಿ ರಸ್ತೆಯ ಮೇಲೆ ಟ್ರಾಕ್ಟರನ್ನು ನಾವು ಓಡಿಸಿದ್ದು ಮರುದಿನ ಆರೋಪಿತರು ನಾವು ಮನೆ ಕಟ್ಟುತಿದ್ದ ಜಾಗಕ್ಕೆ ಬಂದು ಚಾ.ಸಾ.1 ರವರಿಗೆ ಆರೋಪಿತರು ಕೈಗಳಿಂದ ಮೈಕೈಗೆ ಹೊಡೆದಿದ್ದು, 1 ನೇ ಆರೋಪಿ ಚಾ.ಸಾ.1 ರವರ ಕೈಯನ್ನು ಕಚ್ಚಿದ್ದು, ನಾವೆಲ್ಲ ಹೋಗಿ ಬಿಡಿಸಿಕೊಂಡು ಬಂದಿರುತ್ತೇವೆ. ಬೇರೆ ಏನೂ ತೊಂದರೆ ಮಾಡಿರುವುದಿಲ್ಲ. ಪೊಲೀಸರು ನನ್ನನ್ನು ವಿಚಾರಣೆ ಮಾಡಿರುವುದಿಲ್ಲ. ಪೊಲೀಸರು ಸ್ಥಳಕ್ಕೆ ಬಂದು ಪರಿಶೀಲನೆ ಮಾಡಿ ಹೋಗಿರುತ್ತಾರೆ. 2 ನೇ ಆರೋಪಿಯು ಗುಂಡು ಕಲ್ಲನ್ನು ಎತ್ತಿಹಾಕುತ್ತೇನೆ ಎಂದು ಬಂದಿರುತ್ತಾನೆ.

(ಈ ಹಂತದಲ್ಲಿ ಸಾಕ್ಷಿದಾರರು ಅಭಿಯೋಜನೆಯ ಪ್ರಕರಣಕ್ಕೆ ಸಹಕರಿಸಿದ ಕಾರಣ ಮಾನ್ಯ ಸ.ಸ.ಆ ರವರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು **ಭಾಗಶಃ ಪ್ರತಿಕೂಲ ಸಾಕ್ಷಿ** ಎಂದು ಪರಿಗಣಿಸಿ ಪಾಟೀಸವಾಲಿಗಾಗಿ ಅನುಮತಿಯನ್ನು ನೀಡಲಾಯಿತು.)

**ಪಾಟೀಸವಾಲುಃ- ಎ.ಪಿ.ಪಿ. ರವರಿಂದಃ**

1. 29.06.2017 ರಲ್ಲಿ ರಾತ್ರಿ ಸುಮಾರು 1.00 ಗಂಟೆ ಸಮಯದಲ್ಲಿ 1 ನೇ ಆರೋಪಿಯು ನಮ್ಮ ಮನೆಯ ಮುಂದೆ ಟ್ರಾಕ್ಟರ್ ಚಲಾಯಿಸಿದ ಕಾರಣ ಸಾರ್ವಜನಿಕ ಕೊಳವೆಯ ಪೈಪುಲೈನು ಹೊಡೆದುಹೋಗಿ ನಲ್ಲಿಯಲ್ಲಿ ನೀರು ಬರುವಂತಾಗಿದ್ದು, ಮರುದಿನ ಬೆಳಗ್ಗೆ 8.30 ಗಂಟೆ ಸಮಯದಲ್ಲಿ ಆರೋಪಿತರು ನಮ್ಮ ಮನೆಯ ಮುಂದೆ ನಿಂತಿದ್ದು ಆ ಸಮಯದಲ್ಲಿ ನಾನು ಮತ್ತು ಚಾ.ಸಾ.2 ಮತ್ತು ನಾನು ಮನೆಯ ಪಾಯಕ್ಕೆ ನೀರು ಹಾಕಿದ್ದು, ಆರೋಪಿತರು ಪೈಪ್ ಲೈನ್ ಮೇಲೆ ಟ್ರಾಕ್ಟರ್ ಏಕೆ ಚಲಾಯಿಸಿದ್ದೀರಾ ಎಂದು ಕೇಳಿ ಆರೋಪಿತರು ಅಕ್ರಮ ಜಗಳ ತೆಗೆದು ಅವಾಚ್ಯಶಬ್ದಗಳಿಂದ ಬೈದಿರುತ್ತಾರೆ ಎಂದರೆ ಸರಿ, ಅವರು ಬೈದಿರುವ ಕಾರಣ ನಾವೂ ಸಹ ಬೈದಿರುತೆತೇವೆ, ಆ ಪೈಕಿ 2 ಮತ್ತು 3 ನೇ ಆರೋಪಿತರು ನನ್ನ ತಲೆ ಕೂದಲನ್ನು ಹಿಡಿದು ಎಳೆದಾಡಿರುತ್ತಾರೆ ಎಂದರೆ ಸರಿ ಮತ್ತು ನನ್ನ ಸೀರೆಯನ್ನು ಹರಿದುಹಾಕಿರುತ್ತಾರೆ. ಈ ಬಗ್ಗೆ ಪೊಲೀಸರಿಗೆ ಹೇಳಿಕೆಯನ್ನು ಕೊಟ್ಟಿರುತ್ತೇನೆ ಎಂದರೆ ಸರಿ. 1 ಮತ್ತು 2 ನೇ ಆರೋಪಿತರು ಸೈಜುಗಲ್ಲುಗಳನ್ನು ಎತ್ತಿಕೊಂಡು ಬಂದು ಇನ್ನೊಮ್ಮೆ ನಮ್ಮ ತಂಟೆಗೆ ಬಂದರೆ ಇದೇ ಕಲ್ಲುಗಳಿಂದ ಸಾಯಿಸುತ್ತೇವೆ ಎಂದು ಬೆದರಿಕೆಯನ್ನು ಹಾಕಿರುತ್ತಾರೆ ಎಂದರೆ ಸರಿ.

**ಪಾಟೀಸವಾಲುಃ- ಆರೋಪಿ ಪರ ಬಿ.ಜೆ.ಆರ್. ವಕೀಲರಿಂದಃ**

1. ನಾವೇ ನಮ್ಮ ಸೈಟಿನಲ್ಲಿ ಮನೆ ಕಟ್ಟುತ್ತಿದ್ದೆವು ಎಂದರೆ ಸರಿ. ನಾವು ನಮ್ಮ ಸೈಟಿಗೆ ಮರಳು ಮತ್ತು ಕಲ್ಲುಗಳನ್ನು ಹೊಡೆಸಿಕೊಳ್ಳುತ್ತಿದ್ದೆವು. ನಮ್ಮ ಮನೆಯ ಮುಂದಿನ ನೀರಿನ ಪೈಪು ಹೊಡೆದು ಹೋಗಿತ್ತು. ನಾವು ಕಲ್ಲು ಮತ್ತು ಮರಳು ಸಾಗಾಟ ಮಾಡುವಾಗ ನೀರಿನ ಪೈಪು ಹೊಡೆದು ಹೋಗಿತ್ತು ಎಂದರೆ ಸರಿ. ನನ್ನ ಮಗ ವ್ಯವಸಾಯ ಕೆಲಸ ಮಾಡುತ್ತಾನೆ ಆ ಸಮಯದಲ್ಲಿ ಬೆರಳನ್ನು ಕತ್ತರಿಸಿಕೊಂಡು ಗಾಯ ಮಾಡಿಕೊಂಡಿರುತ್ತಾನೆ ಎಂದರೆ ಸರಿಯಲ್ಲ, ಆರೋಪಿತರು ಹಲ್ಲಿನಿಂದ ಕಚ್ಚಿರುತ್ತಾರೆ. ಆರೋಪಿಯು ನನ್ನ ಮಗನ ಕೈ ಕಚ್ಚುವಾಗ ನಾನು ಪಕ್ಕದಲ್ಲೇ ಇದ್ದೆ. ಸಮಾರು 10 ಜನ ಇದ್ದರು. ಆ ಸಮಯದಲ್ಲಿ ನಾನು ಮತ್ತು ನಮ್ಮ ಯಜಮಾನರು ಮಾತ್ರ ಬಿಡಿಸಿಕೊಂಡಿದ್ದೇವೆ ಎಂದರೆ ಸರಿ.
2. ಪಂಚಾಯತಿಯವರು ನನ್ನ ಮಗನ ವಿರುದ್ಧ ನೀರಿನ ಪೈಪು ಹೊಡೆದು ಹಾಕಿರುವುದಕ್ಕೆ ಕ್ರಮ ತೆಗೆದುಕೊಳ್ಳುತ್ತಾರೆ ಎನ್ನುವ ಕಾರಣ ನಾವೇ ಆರೋಪಿತರ ವಿರುದ್ಧ ಸುಳ್ಳು ಕೇಸು ಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ಆರೋಪಿತರು ನಮಗೂ 2-3 ವರ್ಷಗಳ ಮೊದಲು ಮನೆಯನ್ನು

ಕಟ್ಟಿದ್ದಾರೆ ಎಂದರೆ ಸರಿಯಲ್ಲ ನಾವು ಮನೆಯನ್ನು ಕಟ್ಟಿದ ನಂತರ ಅವರು ಮನೆಯನ್ನು ಕಟ್ಟಿರುತ್ತಾರೆ. ನಾವು ಮತ್ತು ಆರೋಪಿತರು ಮನೆಯನ್ನು ಕಟ್ಟುವ ಜಾಗ ಸ್ವಲ್ಪ ದೂರ ಇದೆ ಎಂದರೆ ಸರಿ.

3. ಆರೋಪಿತರು ಪಿ.ಡಿ.ಓ. ರವರ ಬಳಿ ದೂರು ಕೊಡುತ್ತಾರೆ ಎನ್ನುವ ಕಾರಣಕ್ಕಾಗಿ ನಮ್ಮ ಮಗನ ಮೂಲಕ ಸುಳ್ಳು ದೂರನ್ನು ದಾಖಲು ಮಾಡಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿತರಿಗೂ ನಮಗೂ ಮೊದಲಿನಿಂದ ವೈಶಮ್ಯ ಇದೆ ಎಂದರೆ ಸರಿ. ಆರೋಪಿತರೂ ಯಾವುದೇ ಗಲಾಟೆ ಮಾಡದಿದ್ದರೂ ಸಹ ಸುಳ್ಳು ದೂರು ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ. ಪೊಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

( ಉಕ್ತಲೇಖನವನ್ನು ತರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್ ಗೊಳಿಸಿ ದಾಖಲಿಸಿ ಪ್ರಿಂಟ್ ತೆಗೆಯಲಾಯಿತು )

**ಓದಿ ಹೇಳಿ ಕೇಳಿ ಸರಿ ಇದೆ,**

**ಹಿರಿಯ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ, ಶಿರಾ.**